**ಸಾಕ್ಷಿಯನ್ನು ದಿನಾಂಕ 19.08.2024 ರಂದು ಕರೆದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 6ನೇ ಪ್ರತಿವಾದಿಯ ಪರ ಶ್ರೀ ಎಸ್ ಆರ್ ಬಿ ವಕೀಲರಿಂದಃ**

3. ದಾವಾ ಐಟಂ 1 ಅನ್ನು ಖರೀದಿಸಿದಾಗ ನನ್ನ ತಾತ ಕಾತೇರಪ್ಪ ಬದುಕಿದ್ದರು. ನನ್ನ ತಾತ ಕಾತೇರಪ್ಪ ಬದುಕಿರುವವರೆಗೂ ಮನೆಯ ಯಜಮಾನಿಕೆಯನ್ನು ಅವರೇ ಮಾಡುತ್ತಿದ್ದರು ಎಂದರೆ ಸಾಕ್ಷಿ ನನ್ನ ದೊಡ್ಡಪ್ಪ ಮುನೆಪ್ಪ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಮನೆಯ ಯಜಮಾನಿಕೆಯನ್ನು ಕಾತೇರಪ್ಪ ನವರೇ ಮಾಡುತ್ತಿದ್ದರು, ಮುನೆಪ್ಪ ಮತ್ತು ಕಾತೇರಪ್ಪ ನಿಗೆ ಯಾವುದೇ ಸಂಬಂದ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಪ್ರಕಾರ ಎಲ್ಲಾ ಅಸ್ತಿಗಳು ಕಾತೇರಪ್ಪ ರವರ ವಾರಸುದಾರರಿಗೆ ಹೋಗಬೇಕು.

4. ಕಾತೇರಪ್ಪರವರ ದೊಡ್ಡ ಮಗಳು ಪೂಜಮ್ಮ. ಪೂಜಮ್ಮನವರಿಗೆ 3 ಜನ ಮಕ್ಕಳು. ಆ 3 ಜನ ಮಕ್ಕಳು ಬದುಕಿಲ್ಲ. ಆ 3 ಜನ ಮಕ್ಕಳು ಮುನಿಶಾಮಿ, ವೆಂಕಟರಾಯಪ್ಪ ಮತ್ತು ವೆಂಕಟಮ್ಮ ಆಗಿರುತ್ತಾರೆ. ಮುನಿಶಾಮಿರವರಿಗೆ ಮಕ್ಕಳು ಇಲ್ಲ. ವೆಂಕಟರಾಯಪ್ಪನಿಗೆ 5 ಜನ ಮಕ್ಕಳು ಇದ್ದಾರೆ, ಅವರುಗಳು ಬದುಕಿದ್ದಾರೆ. ವೆಂಕಟಮ್ಮನವರಿಗೆ ಮಕ್ಕಳು ಇಲ್ಲ. ಕಾತೇರಪ್ಪನ 2ನೇ ಮಗಳು ಓಬಕ್ಕ. ಓಬಕ್ಕನವರಿಗೆ 5 ಜನ ಮಕ್ಕಳು. ಅವರುಗಳು ವೆಂಕಟಮ್ಮ, ಕದಿರಪ್ಪ, ನಾರಾಯಣಪ್ಪ, ಕದಿರಮ್ಮ ಮತ್ತು ನಾರೆಮ್ಮ ಆಗಿರುತ್ತಾರೆ. ಆ 5 ಜನರ ಪೈಕಿ ಕದಿರಪ್ಪ ಮತ್ತು ನಾರಾಯಣಪ್ಪ ಮಾತ್ರ ಬದುಕಿದ್ದಾರೆ. ಹೆಣ್ಣು ಮಕ್ಕಳು ತೀರಿಕೊಂಡಿದ್ದಾರೆ. 3 ಜನ ಹೆಣ್ಣು ಮಕ್ಕಳಿಗೆ ಮಕ್ಕಳು ಇದ್ದರು ಅವರು ತೀರಿಕೊಂಡಿದ್ದಾರೆ. ಆ 3 ಜನ ಹೆಣ್ಣು ಮಕ್ಕಳಿಗೆ ಮೊಮ್ಮಕ್ಕಳು ಇದ್ದಾರೆಂದರೆ ಸಾಕ್ಷಿ ಅವರ ಮಕ್ಕಳು ಮದುವೆಯಾಗಿರಲಿಲ್ಲ ಎಂದು ನುಡಿಯುತ್ತಾರೆ.

5. ಕಾತೇರಪ್ಪರವರ 3ನೇ ಮಗಳು ವೆಂಕಟಮ್ಮ. ವೆಂಕಟಮ್ಮನವರಿಗೆ 7 ಜನ ಮಕ್ಕಳು. ಅವರುಗಳು ದೊಡ್ಡ ನಾರೆಮ್ಮ, ವೆಂಕಟರಾಯಕಪ್ಪ , ಮುನಿವೆಂಕಟಮ್ಮ, ಕದಿರಮ್ಮ, ಚಿಕ್ಕನಾರೆಮ್ಮ, ಮುನಿಶಾಮಿ ಮತ್ತು ಇನ್ನೊಬ್ಬರ ಹೆಸರು ನೆನಪಿನಲ್ಲಿದೆ ಹೇಳಲು ಆಗುತ್ತಿಲ್ಲ. ವೆಂಕಟಮ್ಮನವರ 7 ಜನ ಮಕ್ಕಳ ಪೈಕಿ ದೊಡ್ಡ ನಾರೆಮ್ಮ, ಮುನಿಶಾಮಿ, ಕದಿರಮ್ಮ ಮತ್ತು ನೆನಪಿನಲ್ಲಿ ಇಲ್ಲದ ಇನ್ನೊಬ್ಬ ವ್ಯಕ್ತಿ ಬದುಕಿದ್ದಾರೆ. ಮೃತ ವೆಂಕಟರಾಯಪ್ಪನಿಗೆ ಇಬ್ಬರು ಮಕ್ಕಳು ಇದ್ದಾರೆ. ಮುನಿವೆಂಕಟಮ್ಮನವರಿಗೆ ಮಕ್ಕಳು

ಇರಲಿಲ್ಲ. ಚಿಕ್ಕನಾರೆಮ್ಮನವರಿಗೆ 3 ಜನ ಮಕ್ಕಳು ಇದ್ದಾರೆ. ನನ್ನ ತಂದೆ 2011 ರಲ್ಲಿ ತೀರಿಕೊಂಡಿದ್ದರು.

6. ನನ್ನ ದೊಡ್ಡಪ್ಪ ಮುನೆಪ್ಪ ಎಲ್ಲಿಯೋ ಹೊರಟು ಹೋಗಿದ್ದಾರೆ, ಅವರು ಬದುಕಿದ್ದಾರೋ ಸತ್ತಿದ್ದಾರೋ ನನಗೆ ಗೊತ್ತಿಲ್ಲ. ಮುನೆಪ್ಪನವರ ಮಗ ಕೃಷ್ಣಪ್ಪ 2008 ರಲ್ಲಿ ತೀರಿಕೊಂಡಿರುತ್ತಾರೆ. ಕೃಷ್ಣಪ್ಪ ಬದುಕಿರುವವರೆಗೂ ನಮ್ಮ ತಂದೆಯ ಜೊತೆ ವಾಸವಿರಲಿಲ್ಲ ಪ್ರತ್ಯೇಕವಾಗಿ ವಾಸವಿದ್ದರು. 1 ನೇ ಪ್ರತಿವಾದಿ ಊರಿನಲ್ಲಿ ಇದ್ದಾಗ ಪ್ರತ್ಯೇಕವಾಗಿ ವಾಸವಿದ್ದರುಎಂದರೆ ಸರಿ. ನಮ್ಮ ತಂದೆ ಮತ್ತು 1 ನೇ ಪ್ರತಿವಾದಿ ನಾವು ಚಿಕ್ಕ ಮಕ್ಕಳು ಇದ್ದಗಿನಿಂದಲೂ ಪ್ರತ್ಯೇಕವಾಗಿ ವಾಸಿಸುತ್ತಿದ್ದರು. ನನ್ನ ತಂದೆ ಮತ್ತು 1 ನೇ ಪ್ರತಿವಾದಿ 65 ವರ್ಷಗಳ ಹಿಂದೆಯೇ ವಿಭಾಗ ಮಾಡಿಕೊಂಡು ಪ್ರತ್ಯೇಕವಾಗಿ ವಾಸಿಸುತ್ತಿದ್ದರು ಎಂದರೆ ಸುಳ್ಳು. 1 ನೇ ಪ್ರತಿವಾದಿ ವಿಭಾಗ ಮಾಡಿಕೊಂಡು ಪ್ರತ್ಯೇಕವಾಗಿ ವಾಸಿಸುತ್ತಾ ಕೂಲಿ ನಾಲಿ ಮಾಡಿಕೊಂಡು ದಾವಾ ಐಟಂ ನಂ 1 ಅನ್ನು ಖರೀದಿಸಿದ್ದರು ಎಂದರೆ ಸಾಕ್ಷಿ ಒಟ್ಟು ಕುಟುಂಬದಿಂದ ಆ ಆಸ್ತಿಯನ್ನು ಖರೀದಿಸಿದ್ದರು ಎಂದು ನುಡಿಯುತ್ತಾರೆ. ದಾವಾ ಐಟಂ ನಂ 1 ಕ್ಕೂ ಕಾತೇರಪ್ಪನ ಇತರೇ ಮಕ್ಕಳಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸುಳ್ಳು. ದಾವಾ ಐಟಂ ನಂ 1 ಅನ್ನು 1 ನೇ ಪ್ರತಿವಾದಿ ಖರಿದಿಸಿದಾಗ ನಾವು ಜನಿಸಿರಲಿಲ್ಲ ಎಂದರೆ ಸಾಕ್ಷಿ ಜನಿಸಿದ್ದೇವು ಎಂದು ನುಡಿಯುತ್ತಾರೆ. ನಾನು 7 ನೇ ತರಗತಿಯವರೆಗೂ ಶಾಲೆ ಕಲಿತಿದ್ದೇನೆ. ನನಗೆ ಈಗ 50 ವರ್ಷ. ದಾವಾ ಐಟಂ ನಂ 1 ಅನ್ನು 1 ನೇ ಪ್ರತಿವಾದಿ ಒಬ್ಬನೇ ಖರೀದಿಸಿ

ಸ್ವಾದೀನಾನುಭವದಲ್ಲಿ ಇದ್ದರೂ ಎಂದರೆ ಸಾಕ್ಷಿ ನಾವು ಮತ್ತು ಅವರು ಇಬ್ಬರು ಸ್ವಾದೀನದಲ್ಲಿ ಇದ್ದೇವು ಎಂದು ನುಡಿಯುತ್ತಾರೆ.

**ಮರುವಿಚಾರಣೆ ಇಲ್ಲ:**

**ಪಾಟೀ ಸವಾಲು : 3 ನೇ ಪ್ರತಿವಾದಿ ಮತ್ತು ಅವರ ಪರ ವಕೀಲರು ಗೈರು ಹಾಜರಿದ್ದು 7 ನೇ ಪ್ರತಿವಾದಿಯ ಪರ ಶ್ರೀ ಎಂವಿ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು 7 ನೇ ಪ್ರತಿವಾದಿ ಪ್ರತಿವಾದ ಪತ್ರ ಸಲ್ಲಿಸದೇ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೆ.ಕೇ.ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು

ಚಿಂತಾಮಣಿ.